# ರೋರಿಕ್ ಮನೆಯಂಗಳದಲ್ಲಿ..

ಹಿಮಾಲಯದ ತಪ್ಪಲಲ್ಲಿ 'ಮಹಾ ತಪಸ್ವಿ' ಕಲಾವಿದ ನಿಕೋಲಸ್ ರೋರಿಕ್‌ರ 200ಕ್ಕೂ ಹೆಚ್ಚು ವರ್ಣ ಕಲಾಕೃತಿಗಳನ್ನು ಹೊಂದಿರುವ ಈ ಅಪೂರ್ವ ನಿವಾಸ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ನಿವಾಸದ ಹಿಂಭಾಗದ ಇಳಿಜಾರಿನಲ್ಲೇ ರೋರಿಕ್ ಅವರ ಸಮಾಧಿಯೂ ಹಿಮಗಿರಿಯತ್ತ ಮುಖ ಮಾಡಿ ಧ್ಯಾನಸ್ಥವಾಗಿದೆ.

■ **ವಸುಂಧರಾ ಎಸ್. ಕುಮಾರ್**
ಚಿತ್ರ: ಡಾ.ಎಂ. ಶಾಂತಕುಮಾರ್



ರೋರಿಕ್ ಮತ್ತು ದೇವಿಕಾರಾಣಿ

ಶಿಮ್ಲಾ, ಕುಲು ಮನಾಲಿಯ ನಮ್ಮ ಪ್ರವಾಸ ಪಟ್ಟಿಯಲ್ಲಿ, ಜಗತ್ತು ಕಂಡ ಅಪೂರ್ವ ಚಿತ್ರಕಾರ ನಿಕೋಲಸ್ ರೋರಿಕ್ ನಿವಾಸದ ಭೇಟಿ ಸೇರಿರಲಿಲ್ಲ. ಆದರೆ ನಮ್ಮ ಸಹ ಪ್ರಯಾಣಿಕರನ್ನು ಶಾಪಿಂಗ್ ಮಾಡಲು ಬಿಟ್ಟು, ನಾವು ಪ್ರತ್ಯೇಕ ಟ್ಯಾಕ್ಸಿಯನ್ನೇರಿ– ಮನಾಲಿಯಿಂದ 10 ಕಿ.ಮೀಟರ್ ದೂರದ ನಗ್ಗರ್ ಪ್ರದೇಶದ ಕಡೆಗೆ ಧಾವಿಸಿದೆವು.

ಸಹಸ್ರಾರು ಕಿ.ಮೀ. ದೂರದ ರಷ್ಯಾ ನಿವಾಸಿಯೊಬ್ಬನನ್ನು ಹಿಮಾಲಯದ ಹಿಮಗಿರಿ– ತನ್ನ ಮಡಿಲಿಗೆ ಆವಿರ್ಭವಿಸಿ ಕೊಂಡದ್ದು ಒಂದು ಯೋಗಾಯೋಗವೇ ಸರಿ. ಹಿಮಾಲಯದ ದತ್ತು ಪುತ್ರ– ನಿಕೋಲಸ್ ರೋರಿಕ್, ಹಿಮಗಿರಿಯ ತಪ್ಪಲನ್ನೇ ತನ್ನ ಕರ್ಮಭೂಮಿ ಆಗಿಸಿಕೊಂಡರು. ಭಾರತೀಯ ಆಧ್ಯಾತ್ಮ, ಬೌದ್ಧ ಧರ್ಮದ ಅಧ್ಯಯನವಲ್ಲದೆ ಅಪ್ರತಿಮ ಕಲಾಭಿವ್ಯಕ್ತಿಯ ಮೂಲಕವೂ ನಾಡಿಗೆ ಕೀರ್ತಿ ತಂದರು.

ಶಿವಾಲಿಕ್ ಪರ್ವತ ಶ್ರೇಣಿಗಳ ಕಡಿದಾದ ರಸ್ತೆಯಲ್ಲಿ ಮುಗಿಲೆತ್ತರದ ಮರಗಳ ನಡುವೆ ಸಾಗಿ ದೇವದಾರು ವೃಕ್ಷಗಳಿಂದಲೇ ನಿರ್ಮಿಸಿದ ಶ್ವೇತವರ್ಣದ ನಿವಾಸವನ್ನು ಕಂಡಾಗ ಆ ಕಲಾ ತಪಸ್ವಿಯನ್ನೇ ಕಂಡಂತೆ ಅನುಭವವಾಯಿತು. ರೋರಿಕ್ ಅವರ ನಿವಾಸ ಈಗಲೂ ಅವರ ವೈಯಕ್ತಿಕ ಜೀವನದ ಛಾಪನ್ನು ಬಿಂಬಿಸುತ್ತಿತ್ತು. ಹಸಿರು ಹೊದ್ದ ತೋಟದ ಮಧ್ಯೆ ನಡೆದು ಅವರ ಪುಟ್ಟ ನಿವಾಸದ ಮೆಟ್ಟಿಲೇರುತ್ತಿದ್ದಂತೆಯೇ ಒಳಗೆ ಸಾಲಾಗಿ ಜೋಡಿಸಲಾದ ವರ್ಣಚಿತ್ರಗಳು ನಮ್ಮನ್ನು ಸ್ವಾಗತಿಸಿದವು. ಅವರ ವಿಶಿಷ್ಟ ಟೆಂಪೆರಾ ಮಾಧ್ಯಮದ ಗಾಢ ನೀಲಿ ವರ್ಣ, ತನ್ನೆಲ್ಲಾ ವಿವಿಧ ಛಾಯೆಯಿಂದ ಸಮ್ಮಿಳಿತಗೊಂಡು ಹಿಮಗಿರಿಯನ್ನೇ ಪ್ರತಿಬಿಂಬಿಸುತ್ತಿದ್ದವು.

ರೋರಿಕ್ ನಿವಾಸದೊಳಗೆ ಎರಡೂ ಮಗ್ಗಲಿನ ಕೋಣೆಗಳಲ್ಲಿ ಗಾಜಿನ ಚೌಕಟ್ಟಿನೊಳಗೆ ಇನ್ನೂರಕ್ಕೂ ಮಿಕ್ಕು ವರ್ಣ ಚಿತ್ರಗಳಿವೆ. ಭಾರತದ ಪ್ರಥಮ